ಮುದ್ದಾಗಿ ಕಾಣುವಂತೆ ಅಲಂಕರಿಸಿದಳು. ತಾನೂ ಸಿಂಗಾರಗೊಳ್ಳಲು ಎರಡುಗಂಟೆಗೂ ಮೀರಿ ಸಮಯ ತಗೆದುಕೊಂಡಳು. ಕಡಿಮೆ ಎಂದರೂ ಇಪ್ಪತ್ತು ಬಾರಿ ಕನ್ನಡಿಯಲ್ಲಿ ನೋಡಿಕೊಂಡಳು. ರಾತ್ರಿಯ ಊಟಕ್ಕೆಂದು ಹಬ್ಬದ ಅಡುಗೆಯನ್ನೇ ಮಾಡಿಟ್ಟಳು. ಶಶಿಧರನಿಗೆ ಇಷ್ಟ ಎಂದು ಕೇಸರಿಬಾತನ್ನು ಮಾಡಿದ್ದಳು.

ಆದರೂ ಸಂಜನಾಳಿಗೆ ಸಮಾಧಾನವಾಗುತ್ತಿಲ್ಲ. ಶಶಿಧರನಿಗೆ ಇನ್ನೂ ಏನೇನು ಇಷ್ಟ ಎಂದು ಜ್ಞಾಪಿಸಿಕೊಳ್ಳತೊಡಗಿದಳು. ಮಗಳು ಚಂದನಾಳ ಅಲಂಕಾರವನ್ನು ಮತ್ತೊಮ್ಮೆ ತಿದ್ದಿದಳು. ತಾನು ಮಗಳನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದೇನೆ ಎಂದು ಶಶಿಧರ ತಿಳಿದುಕೊಳ್ಳಲಿ ಎಂಬುದು ಅವಳ ಒಳ ಆಸೆಯಾಗಿತ್ತು.

ಸಂಜನಾ ಸಮಯ ನೋಡಿಕೊಂಡಳು. ಆಗಲೇ ಐದು ಗಂಟೆಯಾಗಿದೆ. ಇನ್ನು ಒಂದೇ ಗಂಟೆಯಲ್ಲಿ ಶಶಿಧರ ಮನೆಗೆ ಬರಲಿದ್ದಾನೆ. ಅವಳಲ್ಲಿ ಅವ್ಯಕ್ತವಾದ ಭಯವೊಂದು ಮೆಲ್ಲಗೆ ಹುಟ್ಟಿಕೊಳ್ಳತೊಡಗಿತು. ಸಂಜೆ ತನಕ ಸಮಯ ಸರಿದಿದ್ದೇ ಅರಿವಾಗದಿದ್ದ ಸಂಜನಾಳಿಗೆ ಈಗ ಸಮಯವೇ ಹೋಗುತ್ತಿಲ್ಲವೆನಿಸಿತು. ಒಂದೊಂದು ಸೆಕೆಂಡೂ ಒಂದೊಂದು ಗಂಟೆಯಾಯಿತು.

ಈ ಮಧ್ಯೆ ನಂದಿತಾಳಿಗೂ ಫೋನ್ ಮಾಡಿದಳು:

"ನನಗೇಕೋ ತುಂಬಾ ಟೆನ್ಷನ್ ಆಗುತ್ತಿದೆ. ಮನೆಗೆ ಬರುತ್ತೀಯ?"

"ನಿಮ್ಮಿಬ್ಬರ ಮಧ್ಯೆ ನನಗೇನು ಕೆಲಸ?" ಎಂದು ಮುಗುಳ್ನಗುತ್ತಾ ಹೇಳಿದ ನಂದಿತಾ, "ನಾನು ಬಂದರೆ ನೀವು ಮುಕ್ತವಾಗಿ ಮಾತನಾಡಲು ಆಗುವುದಿಲ್ಲ. ಧೈರ್ಯ ತಗೋ" ಎಂದಳು.

ಸಂಜನಾಳಿಗೆ ಅದೂ ಸರಿ ಎನಿಸಿತು.

ಮಗಳು ಚಂದನಾಳಿಗೆ, "ನಿಮ್ಮ ಅಪ್ಪ ಬರುತ್ತಾರೆ ಪುಟ್ಟಾ" ಎಂದಳು.

ಅಮ್ಮ ಏನೋ ಖುಷಿಯಲ್ಲಿದ್ದಾಳೆಂದು ಮಾತ್ರ ಅವಳಿಗೆ ಗೊತ್ತಿತ್ತು. ಈ ಅಪ್ಪ ಎಂದರೆ ಏನು ಎಂದು ಗೊತ್ತಾಗಲಿಲ್ಲ.

"ಹೌದಾ" ಚಂದನಾ ನಿರಾಸಕ್ತಿಯಿಂದ ಹೇಳಿ ತನ್ನ ಪಾಡಿಗೆ ತಾನು ಬೊಂಬೆಗಳ ಆಟದಲ್ಲಿ ಮಗ್ನಳಾದಳು.

ಸಂಜನಾಳಿಗೆ ಕೊಂಚ ನಿರಾಸೆಯಾದರೂ ಅವಳಿನ್ನೂ ಪುಟ್ಟ ಮಗು, ಸಂಬಂಧಗಳ ಬಗ್ಗೆ ಅಷ್ಟೊಂದು ತಿಳಿವಳಿಕೆಯಿಲ್ಲ ಎಂದು ತನಗೆ ತಾನೇ ಸಮಾಧಾನ ಮಾಡಿಕೊಂಡಳು.

ಚಂದನಾಳನ್ನು ಜೊತೆಯಲ್ಲಿ ಕೂರಿಸಿಕೊಂಡು ಟೀವಿ ಆನ್ ಮಾಡಿದಳು. ಸೀರಿಯಲ್‌ಗಳು, ಸಿನಿಮಾಗಳು ಯಾವುವೂ ಅವಳ ಗಮನ ಸೆಳೆಯಲಿಲ್ಲ. ಪದೇ ಪದೇ ಸಮಯ ನೋಡಿಕೊಳ್ಳುತ್ತಾ ಇದ್ದ ಸಂಜನಾಗೆ ಆರು ಗಂಟೆ ಹತ್ತಿರ ಹತ್ತಿರವಾದಂತೆಲ್ಲಾ ಉದ್ವೇಗ ಹೆಚ್ಚಾಗತೊಡಗಿತು.

ಆರು ವರ್ಷಗಳ ನಂತರ ಶಶಿಧರ ಹಾಗೂ ತಾನು ಮುಖಾಮುಖಿಯಾಗಲಿದ್ದೇವೆ. ತನ್ನನ್ನು ನೋಡಿದ ತಕ್ಷಣ ಶಶಿಧರ ಹೇಗೆ ಪ್ರತಿಕ್ರಿಯಿಸಬಹುದು? ನಗುತ್ತಾ ನಿಲ್ಲುತ್ತಾನೋ? ಅಥವಾ ತನ್ನನ್ನು ಬಿಗಿಯಾಗಿ ಅಪ್ಪಿಕೊಳ್ಳುತ್ತಾನೋ? ಅವನನ್ನು ಕಂಡ ತಕ್ಷಣ ತಾನು ಹೇಗೆ ಪ್ರತಿಕ್ರಿಯಿಸಬೇಕು? ನಗುವುದೋ ಅಥವಾ ಓಡಿಹೋಗಿ ಅವನ ಎದೆಯೊಳಗೆ ತಲೆಯನ್ನು ಹುದುಗಿಸಿಬಿಡುವುದೇ? ತಲೆತುಂಬಾ ಇಂತಹ ಪ್ರಶ್ನೆಗಳೇ ಮೂಡುತ್ತಿದ್ದವು.

ಕಾಲಿಂಗ್ ಬೆಲ್ ಶಬ್ದ ಮಾಡತೊಡಗಿತು.

'ಓಹ್ ಶಶಿಧರ ಬಂದೇ ಬಿಟ್ಟ ಎನಿಸುತ್ತೆ' ಎಂದುಕೊಂಡ ಸಂಜನಾಳ ಕೈ ಕಾಲುಗಳು ಕಂಪಿಸತೊಡಗಿದವು. ಆ ಸ್ಥಿತಿಯಲ್ಲೇ ಚಂದನಾಳನ್ನು ಎತ್ತಿಕೊಂಡು ಹೋಗಿ ಬಾಗಿಲು ತೆರೆದಳು.